# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಗಳೂರು

## ಸಿ ಸಿ ನಂಃ398/2022

## ಡಿಡಬ್ಲೂ-1

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.** **ದಿನಾಂಕಃ07.11.2025**

ಹೆಸರು : ಭರತ್ ಕುಮಾರ್ ಜೆ ಹೆಚ್ ತಂದೆ ಬಿ ಎಸ್ ಹಾಲಪ್ಪ

ವಯಸ್ಸು : **30** ವರ್ಷ

ಉದ್ಯೋಗ : ಏನು ಇಲ್ಲ

ವಿಳಾಸ : ಬಸವೇಶ್ವರ ನಿಲಯ ,ರಾಮಾಲಯ ರಸ್ತೆ , ಜಗಳೂರು ಟೌನ್

**ಮುಖ್ಯ ವಿಚಾರಣೆ :** ಆರೋಪಿ **ಪರ ವಕೀಲರಿಂದಃ**

ನನಗೆ ಪಿರ್ಯಾದಿಗೆ ನನಗೆ ಗೊತ್ತು , ಅವರು 10 ವರ್ಷದಿಂದ ಪರಿಚಯ . ಪಿರ್ಯಾದಿಯು ಪಿಗ್ಮಿ ಕಲೆಕ್ಟರ್ ಆಗಿರುತ್ತಾರೆ . ನಾನು ಮತ್ತು ಪಿರ್ಯಾದಿ ಯಾವುದೇ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ . ನಾನು ಯಾವುದೇ ಚೆಕ್ ನೀಡಿರುವುದಿಲ್ಲ . ನಾನು ಪಿರ್ಯಾದಿಯಲ್ಲಿ ತಿಳಿಸಿರುವ ಹಾಗೆ ನಾನು ದಿಃ 05.11.2021 ರಂದು 5 ಲಕ್ಷ ಸಾಲ ಪಿರ್ಯಾದಿಯಿಂದ ಪಡೆದುಕೊಂಡಿರುವುದಿಲ್ಲ . ಪಿರ್ಯಾದಿ ನನ್ನ ವಿರುದ್ದ ಸುಳ್ಳು ಪಿರ್ಯಾದು ಸಲ್ಲಿಸಿರುತ್ತಾರೆ . ನಾನು ದಿಃ 02.02.2022 ಎಂದು ನಮೂದಿಸಿ ಪಿರ್ಯಾದಿಗೆ ಯಾವುದೇ ಚೆಕ್ ನೀಡಿರುವುದಿಲ್ಲ . ನಿಪಿ 1 ಚೆಕ್ ನನ್ನದು ಇರುತ್ತದೆ , ಅದರಲ್ಲಿರುವ ಸಹಿ ನನ್ನದು ಇರುವುದಿಲ್ಲ . ಪಿರ್ಯಾದಿಯಲ್ಲಿ ತಿಳಿಸಿರುವ ಹಾಗೆ ನಿಪಿ 1 ಚೆಕ್ ಅನ್ನು ಪಿರ್ಯಾದಿಯ ಖಾತೆಗೆ ಸಲ್ಲಿಸಿ ಸಾಕಷ್ಟು ಹಣ ಇಲ್ಲ ಎಂದು ವಾಪಾಸಾಗಿರುತ್ತದೆ ಎಂದರೆ ಸುಳ್ಳು ಇರುತ್ತದೆ . ನನಗೆ ಪಿರ್ಯಾದಿಯಿಂದ ಯಾವುದೇ ನೋಟೀಸ್ ತಲುಪಿರುವುದಿಲ್ಲ .

ನಾನು ಜಗಳೂರು ಪಟ್ಟಣದ SBI ಬ್ಯಾಂಕಿನ ಬಳಿ ಎಸ್ ಪಿ ಬುಕ್ ಸ್ಟಾಲ್ ಅಂಗಡಿಯನ್ನು ನಡೆಸುತ್ತಿದ್ದೆ, ನಾನು ಸದರಿ ಅಂಗಡಿಯಲ್ಲಿ ಸಹಿ ಮಾಡದ ಖಾಲಿ ಚೆಕ್ ಗಳನ್ನು ಇಟ್ಟಿದ್ದೆ . ನಾನು ನನ್ನ ಸ್ನೇಹಿತರಾದ ಮಂಜುನಾಥ ವಿವಿಸಿ ಮತ್ತು ಪಿರ್ಯಾದಿ ರವರು ನನಗೆ ಸುಮಾರು 10 ವರ್ಷದಿಂದ ಸ್ನೇಹಿತರು

ಇರುತ್ತಾರೆ . ಅವರು ನಮ್ಮ ಅಂಗಡಿ ಬಂದು ಹೋಗಿ ಮಾಡುತ್ತಿದ್ದರು . ಅವರು ನನ್ನ ಅಂಗಡಿಯಲ್ಲಿ ಸುಮಾರು 11 ಸಹಿ ಮಾಡದ ಚೆಕ್ ಗಳನ್ನು ಪಡೆದುಕೊಂಡು , ಅವುಗಳನ್ನು ದುರುಪಯೋಗ ಪಡಿಸಿಕೊಂಡು ಪ್ರಕರಣ ದಾಖಲು ಮಾಡುವುದಾಗಿ ನನಗೆ ಬೆದರಿಸಿರುತ್ತಾರೆ . ಈ ಬಗ್ಗೆ ನಾನು ಇದೇ ನ್ಯಾಯಾಲಯದಲ್ಲಿ ಪಿರ್ಯಾದಿ , ಮಂಜುನಾಥ ವಿ.ವಿ.ಸಿ , ಲೊಕೇಶ್ ಮತ್ತು ಮಹಾಂತೇಶ್ ಓ ರವರ ವಿರುದ್ದ ಖಾಸಗಿ ದೂರನ್ನು PCR 92/2022 ರಂತೆ ಸಲ್ಲಿಸಿರುತ್ತೇನೆ . ಮಹಾಂತೇಶ್ ಎಂಬುವವರು ಮೊದಲ ಬಾರಿಗೆ ರೂ. 5 ಲಕ್ಷಕ್ಕೆ ಚೆಕ್ ಪ್ರಕರಣವನ್ನು ದಾಖಲಿಸಿರುತ್ತಾರೆ . ಮಂಜುನಾಥ ವಿ.ವಿ.ಸಿ ಎಂಬುವವರ ಇದೇ ನ್ಯಾಯಾಲಯದಲ್ಲಿ ರೂ. 5 ಲಕ್ಷಕ್ಕೆ ಮತ್ತೊಂದು ಚೆಕ್ ಪ್ರಕರಣವನ್ನು ದಾಖಲಿಸಿರುತ್ತಾರೆ . ನಂತರ ಲೊಕೇಶ್ ಎಂಬುವವರು ಇದೇ ನ್ಯಾಯಾಲಯದಲ್ಲಿ ರೂ. 4 ಲಕ್ಷಕ್ಕೆ ಮತ್ತೊಂದು ಚೆಕ್ ಪ್ರಕರಣವನ್ನು ದಾಖಲಿಸಿರುತ್ತಾರೆ . ನಾನು ಪಿರ್ಯಾದಿ ಮತ್ತು ಸದರಿಯವರಿಂದ ಯಾವುದೇ ಹಣವನ್ನು ಸಾಲವಾಗಿ ಪಡೆದುಕೊಂಡಿರುವುದಿಲ್ಲ . ಮಂಜುನಾಥ ವಿ.ವಿ.ಸಿ ಮತ್ತು ಪಿರ್ಯಾದಿಯು ನನ್ನ ಅಂಗಡಿಯಲ್ಲಿ ಇಟ್ಟಿದ್ದ ಚೆಕ್ ಗಳನ್ನು ದುರುಪಯೇಗ ಪಡಿಸಿಕೊಂಡು ಈ ಪ್ರಕರಣವನ್ನು ಸಲ್ಲಿಸಿರುತ್ತಾರೆ . ಪಿರ್ಯಾದಿಯ ಈ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ . ನನ್ನ ಮುಖ್ಯವಿಚಾರಣೆ ಸಂಬಂದವಾಗಿ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು , ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿರುತ್ತಾರೆ.)**

**ಓ ಹೇ ಕೇ ಸರಿ ಇದೆ**

**ಸಹಿ/-**

**ಪ್ರ.ದ.ನ್ಯಾ.ದಂ., ಜಗಳೂರು**